# ಅಜ್ಜ ನೀಡಿದ ಪೆನ್ನು ಹಿಡಿದು

**ಹಿನಾ ಅಸ್ವಾನಿ | ಸಿಂಧಿ**

1 ನನ್ನ ಆಲೋಚನೆಗಳನ್ನು ನನ್ನದೇ ಆದ ಸೃಜನಶೀಲ ವಿಧಾನದಲ್ಲಿ ಬರೆಯುತ್ತ, ಅದನ್ನು ಇನ್ನಷ್ಟು ಚಂದಗೊಳಿಸುತ್ತ ನನ್ನ ಆತ್ಮವನ್ನೇ ತಂಪಾಗಿಸಿಕೊಳ್ಳುವ ಪ್ರಕ್ರಿಯೆ ಈ ಬರವಣಿಗೆ. ಸಮಾಜವನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಬರವಣಿಗೆ ಒಂದು ಸೃಜನಶೀಲ ವಿಧಾನವೂ ಹೌದು. ಬರೆಯುವುದೆಂದರೆ, ಅದು ಓದುವುದೆಂದೇ ಅರ್ಥ. ಬರವಣಿಗೆಯ ಪೂರ್ವರೂಪವೇ ಓದುವುದು, ಗಮನಿಸುವುದು, ಸಮಾಜದ ಆಗುಹೋಗುಗಳಿಗೆ ಸ್ಪಂದಿಸುವುದು. ಇವೆಲ್ಲ ಪ್ರಕ್ರಿಯೆಗಳು ಬರಹಗಾರ್ತಿಯ ಗಮನವನ್ನು ಸೆಳೆಯುತ್ತವೆ ಮತ್ತು ಆ ಬಗ್ಗೆ ಬರೆಯುವ ಹೊಣೆಗಾರಿಕೆಯನ್ನು ಆಕೆಯ ಮೇಲೆ ಹೇರುತ್ತವೆ.

ಸಮಾಜವನ್ನು ವಿಮರ್ಶಿಸುವುದಕ್ಕೆ ಬರವಣಿಗೆಯು ಒಂದು ಸೃಜನಶೀಲ ಸಾಧನ. 'ಆಕೆ ಬರೆಯುತ್ತಿದ್ದಾಳೆ' ಎಂದರೆ, ಸಮಾಜದೆಡೆಗೆ ತನ್ನ ಅವಲೋಕನವನ್ನು, ವಿಮರ್ಶೆ–ಟೀಕೆ ಹಾಗೂ ಶ್ಲಾಘನೆಗಳನ್ನು ಓದುಗರು ಓದಬೇಕೆಂಬ ಬಯಕೆ ಅವಳ ಅಂತರಂಗದಲ್ಲಿರುತ್ತದೆ. ಸಾಮಾನ್ಯವಾಗಿ 'ಮೂಡ್ ಸ್ವಿಂಗ್'ಗಳೇ ಬರಹಗಾರ್ತಿಗೆ ತನ್ನ ಆಲೋಚನೆಗಳನ್ನು ತ್ವರಿತವಾಗಿ ಬರೆಯುವಂತೆ ಪ್ರೇರೇಪಿಸುತ್ತವೆ. ಅವಲೋಕನವು ಎಷ್ಟು ಸೂಕ್ಷ್ಮವಾಗಿ ಆಳವಾಗಿ ಇರುತ್ತದೋ, ಆಗ ಬರವಣಿಗೆಗೆ ಯಾವುದೇ ನಿರ್ದಿಷ್ಟ ಅಗತ್ಯಗಳು ಇರುವುದಿಲ್ಲ. ಸಮಾಜದ ಬಗ್ಗೆ ತನ್ನೊಳಗೆ ಮೂಡಿದ ಅನಿಸಿಕೆಗಳನ್ನು ಆಕೆ ಬರೆಯುತ್ತಾಳೆ, ತನ್ನ 'ಸ್ಪೇಸ್' ಅನ್ನು ಕಾಯ್ದಿರಿಸಿಕೊಳ್ಳುತ್ತ ಸಮಾಜದ ಆಗುಹೋಗುಗಳನ್ನು ಗಮನಿಸುತ್ತಿರುತ್ತಾಳೆ.

ಕಳೆದೆರಡು ವರ್ಷಗಳಲ್ಲಿ ನಾನು ಸಾಹಿತ್ಯ ಕ್ಷೇತ್ರದಲ್ಲಿ ಗುರುತಿಸಿಕೊಂಡಿರುವೆ. ನನಗೆ ಅನಿಸಿದ್ದನ್ನು ಬರೆಯುತ್ತ ಸಾಗಿರುವೆ. ಅಲ್ಲಿ ಋಣಾತ್ಮಕ, ಸಕಾರಾತ್ಮಕ ಎಂಬ ಭೇದವಿಲ್ಲ. ನಾನ್ಯಾರು ಎಂಬುದನ್ನು ಅಭಿವ್ಯಕ್ತಿಗೊಳಿಸುವುದಕ್ಕೆ ಬರವಣಿಗೆ ಸಹಕಾರಿಯಾಗಿದೆ.

2 ಹೌದು, ಮಹಿಳೆಯಾಗಿರುವುದಕ್ಕೂ, ಬರವಣಿಗೆಯನ್ನು ಆಯ್ಕೆ ಮಾಡಿಕೊಂಡಿರುವುದಕ್ಕೂ ಸಂಬಂಧವಿದೆ. ನನ್ನ ಅಮ್ಮ ಬರಹಗಾರ್ತಿ. ಅವರ ಮಾರ್ಗದರ್ಶನದಲ್ಲಿ ನಾನು ಬರವಣಿಗೆ ಶುರು ಮಾಡಿದೆ. ಚಿಕ್ಕಂದಿನಲ್ಲಿ ನನ್ನ ಅಜ್ಜ, ಪೆನ್ನೊಂದನ್ನು ನೀಡಿ, 'ಬರೆಯುತ್ತಿರು. ಒಳ್ಳೆಯದಾಗಲಿ' ಎಂದು ಹಾರೈಸಿದ್ದು ಇನ್ನೂ ನೆನಪಿದೆ. ಆ ಪೆನ್ನು ಈಗಲೂ ನನ್ನ ಬಳಿಯಿದೆ.

ಮಹಿಳೆಯರು ಮತ್ತೊಬ್ಬ ಮಹಿಳೆಯ ಕೆಲಸಗಳನ್ನು ಪ್ರೋತ್ಸಾಹಿಸುವುದು ಅತ್ಯಗತ್ಯವೆಂದು ನಾನು ಭಾವಿಸುತ್ತೇನೆ. ತಮ್ಮದೇ ಕ್ಷೇತ್ರದಲ್ಲಾಗಲೀ, ಇತರ ಕ್ಷೇತ್ರದಲ್ಲಾಗಲೀ ಕೆಲಸ ಮಾಡುವ ಮಹಿಳೆಯರನ್ನು ಪ್ರೋತ್ಸಾಹಿಸಬೇಕು. ಬರವಣಿಗೆಯು